“ಇಲ್ಲ ಸರ್. ಅಪರೂಪಕ್ಕೆ ಮಾತ್ರ. ಕಳೆದ ಆರು ತಿಂಗಳಲ್ಲಿ ಮೂರು ಬಾರಿ ಮಾತ್ರ ಕುಡಿದದ್ದು. ಅದೂ ಒಮ್ಮೆಗೆ ಎರಡು ಪೆಗ್ ಮಾತ್ರ. ಯಾರೋ ಬೇಕಂತಲೇ ನಿಮಗೆ ಸುಳ್ಳು ಹೇಳಿದ್ದಾರೆ. ನನ್ನನ್ನು ಮುಗಿಸಲು ಮಾಡಿದ ಸಂಚು ಇದು. ನನ್ನನ್ನು ನಂಬಿ ಸರ್” ಎಂದ. ಅವನ ಕಣ್ಣಂಚಿನಲ್ಲಿ ಒಂದೆರಡು ಹನಿ ನೀರು ಇಳಿದಿತ್ತು.

“ನಿನಗೆ ವಾರ್ನಿಂಗ್ ಕೊಡೋದು ನನ್ನ ಡ್ಯೂಟಿ. ಇನ್ನೊಮ್ಮೆ ಕುಡಿದು ರಂಪಾಟ ಮಾಡಿದೀಯಾದರೆ ಕೆಲಸ ಕಳೆದುಕೊಳ್ಳುತ್ತೀಯಾ. ಜಾಗ್ರತೆಯಿಂದಿರು. ಕುಡಿದು ಮಲಗಿಕೋ. ಮನೆಯಿಂದ ಹೊರಗೆ ಇಳಿದು ಯಾಕೆ ಜಗಳ ಮಾಡುತ್ತೀಯಾ?” ಎಂದೆ ನಾನು.

“ನನ್ನಿಂದಾಗಿ ಹಾಗೆಲ್ಲ ಗಲಭೆಯಾಗಿಲ್ಲ ಸರ್. ಕಂಪ್ಲೇಂಟ್ ಮಾಡಿದ್ದು ಯಾರು ಅಂತ ನನಗೆ ಗೊತ್ತಿದೆ. ಮ್ಯಾನೇಜರರ ಮನೆಯಲ್ಲಿ ಒಬ್ಬರು ಮನೆಗೆಲಸ ಮಾಡುವ ಲೇಡಿ ಇದ್ದಾರೆ. ಹಿಂದೆ ನಾವು ಒಟ್ಟಿಗೆ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದೆವು. ಆಕೆ ನನಗೆ ತುಂಬ ಸಹಾಯ ಮಾಡಿದ್ದಾಳೆ. ಇಲ್ಲಿ ನೌಕರಿ ಕೊಡಿಸಿದ್ದೂ ಆಕೆಯೇ. ಆಕೆಗೆ ವಿಪರೀತ ಕುಡಿಯುವ ಹುಚ್ಚು. ಯಾರಾದರೂ ಕುಡಿಸಿದರೆ ಕಂಠಪೂರ್ತಿ ಕುಡೀತಾಳೆ. ಆಮೇಲೆ ಅವಳಿಗೆ ಮೈಮೇಲೆ ಪ್ರಜ್ಞೆ ಇರುವುದಿಲ್ಲ. ಹೋಟೆಲಿನ ಕೆಲವರೆಲ್ಲ ಅವಳಿಗೆ ಕುಡಿಸಿ ಸೆಕ್ಸಿಗೆ ಬಳಸಿಕೊಳ್ಳುತ್ತ ಇದ್ದರು. ನಾನು ಟೀಕಿಸಿದ್ದಕ್ಕೆ ನನ್ನ ಮೇಲೆಯೇ ಅಪಪ್ರಚಾರ ಮಾಡಿದರು. ಅವಳ ನೌಕರಿ ಹೋಯಿತು... ನನ್ನದೂ ಹೋಯಿತು. ನನಗೆ ಅವಳ ನಿಕಟ ಪರಿಚಯ ಇದೆ ಅಂದ ಮಾತ್ರಕ್ಕೆ ನಾನು ಸರ್ವರಿಗೂ ಅವಳ ಪರಿಚಯ ಮಾಡಿಕೊಡಬೇಕಾ? ಅವಳನ್ನು ಪಾರ್ಟಿಗೆ ಕರೆದುತರಲು ನಾನವಳ ಏಜೆಂಟಾ? ಯಾರೇ ಆಗಲಿ, ನನ್ನ ಮುಂದೆ ಅವಳ ಮಾತೆತ್ತಿದರೆ

